ತಡಹಿಂಡಿಯಲಾದ ಪ್ರಶ್ನೆ

ಬೆಂಗಳೂರಿನ ಅಲಸೂರು ಕೆರೆಯ ಹೂಳೆತ್ತುವುದು.

135(1080) ಶ್ರೀ ಎನ್. ರಾಜಣ್ಣ, (ಭಾರತಿನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನ ಅಲಸೂರು ಕೆರೆಯಲ್ಲಿನ ಹೂಳನ್ನು ಇನ್ನು 15 ದಿವಸಗಳಲ್ಲಿ ತೆಗೆಸುವುದಾಗಿ ಹಿಂದಿನ ಬೆಂಗಳೂರು ನಗರಾಭಿವೃದ್ಧಿ ಸಚಿವರು ವಿಧಾನ ಸಭೆಯಲ್ಲಿ ಕಳೆದ ವರ್ಷ ಆಶ್ವಾಸನೆ ನೀಡಿದ್ದು ನಿಜವೆ?

ಆ) ಹಾಗಿದ್ದಲ್ಲಿ, ಈ ಹೂಳನ್ನು ತೆಗೆಯಲು ಇಲ್ಲಿಯವರೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) 1998-99 ರಲ್ಲಿ ಈ ಕೆರೆಯ ಹೂಳು ತೆಗೆಯಲು ಹಾಗೂ ಶುದ್ಧೀಕರಿಸಲು ಈವರೆಗೆ ಸರ್ಕಾರ ಖರ್ಚು ಮಾಡಿದ ಹಣವೆಷ್ಟು?

ಈ) ಈ ಕೆರೆಯಲ್ಲಿನ ಹೂಳನ್ನು ಪೂರ್ತಿ ತೆಗೆಯಲು ಬೇಕಾಗುವ ಕಾಲಾವಧಿ ಹಾಗೂ ಹಣವೆಷ್ಟು?

ಉ) ಈ ಕೆರೆಗೆ ಕಸಾಯಿ ಖಾನೆಗಳಿಂದ ಕಲ್ಮಶಗಳು ಬಂದು ನೀರು ಕಲುಷಿತಗೊಂಡಿದ್ದು ಅದರಿಂದ ಈ ಪ್ರದೇಶದ ಜನರು ಉಸಿರಾಟ ಜಾಂಡೀಸ್ ಹಾಗೂ ಇತರ ಖಾಯಿಲೆಗಳಿಗೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ ಈ ಬಗ್ಗೆ ಜರೂರು ಕ್ರಮ ಕೈಕೊಳ್ಳದೆ ವಿಳಂಬ ನೀತಿ ಅನುಸರಿಸುತ್ತಿರುವುದಕ್ಕೆ ಕಾರಣಗಳೇನು?

ಋ) ಈ ಕಸಾಯಿ ಖಾನೆಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಹಾಗೂ ಈ ಕೆರೆಗೆ ಬರತಕ್ಕ ಕಲ್ಮಶಗಳನ್ನು ತಡೆಗಟ್ಟಲು ಸರ್ಕಾರದವರು ಕೂಡಲೇ ಕ್ರಮ ಕೈಕೊಳ್ಳುವರೆ?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :—

ಅ) ಹೌದು

ಆ) ಈ ಕೆರೆಯಲ್ಲಿನ ಹೂಳನ್ನು ತೆಗೆಯಲು ಹಾಗೂ ಕೆರೆಯನ್ನು ಸ್ವಚ್ಛಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಬಗ್ಗೆ ಕರ್ನಾಟಕ ಸರ್ಕಾರದ ಮಟ್ಟದಲ್ಲಿ ಅಲಸೂರು ಲೇಕ್ ಪೌಂಡೇಶನ್‌ನ್ನು ರಚಿಸಿದೆ. ಈ ಕೆರೆಯನ್ನು ಶುದ್ಧೀಕರಿಸಲು ಅನೇಕ ತಾಂತ್ರಿಕ ಸಲಹೆಗಳನ್ನು ಆಡ್ಮಿರಲ್ ಡಾಸನ್, ಶ್ರೀ ಜಯರಾಮ್ ಹಾಗೂ ಇರಿನ್ ಪೌಂಡೇಶನ್ ನೀಡಿವೆ. ಈ ವರದಿಗಳ ಅನುಸಾರ ಕೆರೆಯನ್ನು ಸ್ವಚ್ಛಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಇ) ಇಲ್ಲ

ಈ) ಅಂದಾಜೂ 1540 ಲಕ್ಷಗಳು ಬೇಕಾಗುವುದು ಹಾಗೂ ಅಂದಾಜು 2 ವರ್ಷಗಳ ಕಾಲಾವಧಿ ಬೇಕಾಗುವುದು.

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಪರಿಶೀಲಿಸಲಾಗುವುದು.

ಶ್ರೀ ಎನ್. ರಾಜಣ್ಣ:— ಮಾನ್ಯ ಅಧ್ಯಕ್ಷರೇ, ನಾನು ಬೆಂಗಳೂರಿನಲ್ಲಿ ಉಳಿದಿರುವ ಒಂದೇ ಒಂದು ಕೆರೆಯಾದ ಅಲಸೂರು ಕೆರೆಯ ಬಗ್ಗೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬೆಂಗಳೂರಿನ ಅಲಸೂರು ಕೆರೆಯಲ್ಲಿನ ಹೂಳನ್ನು ತೆಗೆಯಲು 15 ದಿನಗಳಲ್ಲಿ ಪ್ರಾರಂಭ ಮಾಡುತ್ತೇವೆ ಎಂದು ಹಿಂದಿನ ಸಚಿವರಾದ ಮಾನ್ಯ ಅನಂತ್‌ನಾಗರವರು ಹೇಳಿದ್ದರು. ಅದಕ್ಕಿಂತ ಮೊದಲು ಮಾನ್ಯ ರೋಶನ್ ಬೇಗ್‌ರವರು ಕೂಡ ಹೇಳಿದ್ದರು. ನಾನು ಸತತವಾಗಿ ನಾಲ್ಕು ವರ್ಷಗಳಿಂದ ಈ ಬಗ್ಗೆ ಪ್ರಯತ್ನ ಮಾಡುತ್ತಾ ಇದ್ದೇನೆ. ಅಲ್ಲಿನ ನೀರಿನ ಸ್ಥಿತಿಯ ಬಗ್ಗೆ ಪತ್ರಿಕೆಗಳಲ್ಲಿ ಬಂದುದನ್ನು ಕೂಡ ನೋಡಿದ್ದೀರಿ. ಕೆರೆಯಲ್ಲಿನ ಮೀನುಗಳು ಆಕ್ಸಿಜನ್ ಇಲ್ಲದೆ ಸಾಯುತ್ತಿವೆ. ಸುತ್ತಮುತ್ತಲಿನ ಮಕ್ಕಳಿಗೆಲ್ಲಾ ವಾಸನೆಯಿಂದಾಗಿ ಜಾಂಡೀಸ್, ಟೈಫಾಯಿಡ್, ಮುಂತಾಗಿ ಕಾಯಿಲೆಗಳು ಬರುತ್ತಾ ಇವೆ. ಶ್ವಾಸಕೋಶದ ಕಾಯಿಲೆಗಳು ಬಂದು ಸಫರ್ ಆಗುತ್ತಾ ಇದ್ದಾರೆ. ಅಲ್ಲಿಂದ 2-3 ಕಿ.ಮೀ. ಅಂತರದಲ್ಲಿ ದಿನಕ್ಕೆ 2,000 ಗಳಷ್ಟು ಕುರಿ- ಮೇಕೆಗಳನ್ನು ಕಟ್ ಮಾಡುತ್ತಾರೆ. ಅದರ ರಕ್ತವು ಅಲಸೂರು ಕೆರೆಗೆ ಬಂದು ಸೇರುತ್ತಿದೆ. ಇದರ ಬಗ್ಗೆ ಏನೇನೋ ಪ್ರಯತ್ನಗಳನ್ನು ಮಾಡಿದ್ದೆ. ಫಿಲ್ಟರ್ಸ್ ಹಾಕಿದರು. ಬಿಡಬ್ಲ್ಯೂಎಸ್‌ಎಸ್‌ನವರು ಏನೇನೋ ಕೆಲಸಗಳನ್ನು ಮಾಡಿದರು. ಪರಿಸ್ಥಿತಿಯು ಹಾಗೇ ಇದೆ. ಸನ್ಮಾನ್ಯ ಸೋಮಣ್ಣನವರು ಅಲ್ಲಿ ಯಾರಿಗೂ ಕಾಯಿಲೆ ಇಲ್ಲ ಎಂದು ಹೇಳುತ್ತಿದ್ದಾರೆ. ಖಾಯಿಲೆಬಂದ ಬಡವರು ಯಾರೂ ನಿಮ್ಮ ಹತ್ತಿರ ಬಂದು ಹೇಳುವುದಿಲ್ಲ. ಆ ಬಡವರ ಕಷ್ಟ ಲೋಕಲ್ ಎಂಎಲ್‌ಎ ಮತ್ತು ಕೌನ್ಸಿಲರ್‌ಗಳಿಗೆ ಮಾತ್ರ ಗೊತ್ತಾಗುವುದು. ಆ ದುರ್ವಾಸನೆ ಏನು ಎಂಬುದನ್ನು ತಾವುಗಳು ಬಂದು ನೋಡಬೇಕು.

ಶ್ರೀ ವಿ. ಸೋಮಣ್ಣ:— ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜಣ್ಣನವರು ಹೇಳಿದ ಹಾಗೆ ಹಿಂದಿನ ಸಚಿವರು ಕೂಡ ಇದನ್ನು ಸರಿಪಡಿಸುವುದಾಗಿ ಹೇಳಿದ್ದರು. ನಾನು ಆ ಕೆರೆ ಹತ್ತಿರ ಹೋಗಿ ಪರಿಶೀಲಿಸಿದ್ದೇನೆ. ಅಲ್ಲಿ ಅಲಸೂರ್ ಲೇಕ್ ಫೌಂಡೇಶನ್ ಎಂದು ಮಾಡಿಕೊಂಡು ಚೀಫ್ ಸೆಕ್ರೆಟರಿಯವರು, ಅಡಿಶನಲ್ ಚೀಫ್ ಸೆಕ್ರೆಟರಿಯವರು, ಫಾರೆಸ್ಟ್ ಇಲಾಖೆಯವರು, ಮಹಾನಗರ ಪಾಲಿಕೆಯವರು, ಎಲ್ಲರೂ ಒಟ್ಟಿಗೆ ಸೇರಿ 9-2-99ರಂದು ಒಂದು ಸಭೆ ಮಾಡಿ ಕೆರೆ ಅಭಿವೃದ್ಧಿ ಕುರಿತು ಸುಮಾರು 15 ಕೋಟಿ 40 ಲಕ್ಷ ರೂಪಾಯಿಗಳ ಒಂದು ಎಸ್ಟಿಮೇಟ್‌ನ್ನು ಮಾಡಿದ್ದಾರೆ. ಈ ಸಮಸ್ಯೆಯು ಬಹಳ ವರ್ಷಗಳಿಂದ ಇದ್ದಂಥ ಸಮಸ್ಯೆ. ಈ ಸಮಸ್ಯೆಯನ್ನು ನಾವು ಕೇವಲ ಖಾಯಿಲೆ ಮುಂತಾದ ವಿಚಾರಗಳ ಬಗ್ಗೆಯೂ ಗಮನಿಸಿ ಖಾಯಂ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಒಂದು ವ್ಯವಸ್ಥೆ ಮಾಡಬೇಕಾಗಿದೆ. ಮಾನ್ಯ ಸದಸ್ಯರಿಗೆ ಈಗಾಗಲೇ ಹೇಳಿದ ಹಾಗೆ ಅವರ ಒಂದು ಕೆಲಸಕ್ಕಾಗಿ 6-4-99 ರಂದು ಅವ ಕ್ಷೇತ್ರಕ್ಕೆ ಹೋಗುತ್ತಿದ್ದೇವೆ ಅದರ ಜೊತೆಗೆ ಈ ಕೆರೆಯ

ಬಗ್ಗೆಯೂ ಕೂಡ ಎಲ್ಲಾ ಅಧಿಕಾರಿಗಳನ್ನು ಜೊತೆಗೆ ಕರೆದುಕೊಂಡು ಹೋಗಿ ಅಲ್ಲಿರತಕ್ಕಂಥ ಬಹಳ ದೀರ್ಘಕಾಲೀನ ಸಮಸ್ಯೆಯನ್ನು, ಅಲ್ಲಿರತಕ್ಕಂಥ ಕಲುಷಿತ ವಾತಾವರಣವನ್ನು ಸರಿಪಡಿಸಲು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ರಾಜಣ್ಣ :— ಅಲ್ಲಿ ಒಂದು ಅಸೋಸಿಯೇಶನ್ ಪ್ರಾರಂಭವಾಗಿ ಹತ್ತು ವರ್ಷಗಳು ಆಯಿತು. ಈಗ ಇನ್ನೊಂದು ಫೌಂಡೇಶನ್ ಬಂದಿದೆ. ನಾನು ಬಹಳ ವರ್ಷಗಳಿಂದ ಕೇಳುತ್ತಾ ಬಂದಿದ್ದೇನೆ. ಅಲ್ಲಿಗೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಅಲ್ಲಿನ ಕಾಲು ಭಾಗ ಸಿಲ್ಟ್ ತೆಗೆಯಿರಿ. ಅಲ್ಲಿ ಸುತ್ತುಮುತ್ತು ಮೂರು ಸ್ಲಾಟರ್‌ಹೌಸ್‌ಗಳು ಇವೆ. ಅವುಗಳನ್ನು ನಗರದ ಹೊರಗಡೆ ಶಿಫ್ಟ್ ಮಾಡಿ. ಹೊಸದಾಗಿ ಸ್ಲಾಟರ್ ಹೌಸ್ ಮಾಡಿ ಈ ಇರತಕ್ಕಂಥ ಸ್ಲಾಟರ್ ಹೌಸ್‌ಗಳನ್ನು ಮಾರ್ಕೆಟ್ ಮಾಡಿಕೊಳ್ಳಲು ಅವರಿಗೆ ಕೊಟ್ಟರೆ ಅವರೂ ಒಪ್ಪಿಕೊಳ್ಳುತ್ತಾರೆ. ಹೀಗೆ ಮಾಡಿದರೆ ಮಾತ್ರ ಆ ಸಮಸ್ಯೆ ಬಗೆಹರಿಯುತ್ತದೆ. ಇಲ್ಲವಾದರೆ ನಮ್ಮ ಮುಖ್ಯಮಂತ್ರಿಯವರು ಹೇಳಿದ ಹಾಗೆ ಗಾಯಕ್ಕೆ ಮುಲಾಂ ಹಾಕಿದರೂ ಗಾಯ ವಾಸಿಯಾಗುವುದಿಲ್ಲ. ದಯವಿಟ್ಟು ಪರಿಹಾರ ಒದಗಿಸುವ ರೀತಿಯ ಕೆಲಸ ಮಾಡಿ, ಇಲ್ಲವಾದರೆ ಜನರು ಬಹಳ ಸಫರ್ ಮಾಡಬೇಕಾಗುತ್ತದೆ. ರಕ್ತ ಹರಿದು ಬರುತ್ತಿರುವುದರಿಂದ ಅಲ್ಲಿ ಮರಗಳು ಕೂಡ ಹೇಗೆ ಒಣಗಿ ಹೋಗುತ್ತಿವೆ ಎಂದು ನೋಡಿ. ಆ ಚಿತ್ರಗಳನ್ನು ತಮಗೆ ಕೊಡುತ್ತೇನೆ.

ಶ್ರೀ ವಿ. ಸೋಮಣ್ಣ :— ಮಾನ್ಯ ಅಧ್ಯಕ್ಷರೇ, ಒಂದು ಕೋಟಿ ರೂಪಾಯಿ ಖರ್ಚು ಮಾಡಿದರೆ ಸಾಕು ಎಂದು ಹೇಳಿದ್ದಾರೆ. 6ನೇ ತಾರೀಖು ನಾನು ಮಾನ್ಯ ಸದಸ್ಯರ ಜೊತೆಗೆ ಹೋಗುತ್ತೇನೆ. ಒಂದೆರಡು ಕೋಟಿಗಳಲ್ಲಿ ಆ ಕೆಲಸವಾಗುವುದಾದರೆ ಮಾನ್ಯ ಸದಸ್ಯರು ಯಾವ ರೀತಿಯಲ್ಲಿ ಸಲಹೆ ಕೊಡುತ್ತಾರೋ ಅದನ್ನು ಸ್ವೀಕಾರ ಮಾಡಿ ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಸ್ಲಾಟರ್ ಹೌಸ್‌ನ್ನು ಶಿಫ್ಟ್ ಮಾಡಿ ಎಂದು ಹೇಳಿದ್ದಾರೆ. ಎಲ್ಲಿ ಅದಕ್ಕೆ ಸೂಕ್ತವಾಗಿರುವ ಪ್ರದೇಶವಿದೆ ನಾವು ಅವರು ಎಲ್ಲರೂ ಕೂತು ಚರ್ಚೆಮಾಡಿ ಶಿಫ್ಟ್ ಮಾಡುವುದಕ್ಕೆ ನಮ್ಮದೇನು ಅಭ್ಯಂತರವಿಲ್ಲ.

ಅಧ್ಯಕ್ಷರು :— ಪ್ರಶ್ನೋತ್ತರಗಳು ಮುಗಿಯಿತು.

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಮಂಜುನಾಥ್ (ಅರಣ್ಯ ಸಚಿವರು) :— ಅಧ್ಯಕ್ಷರೆ 14ನೇ ಪಟ್ಟಿಯಲ್ಲಿರುವ 76 ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಕ್ರಮ ಸಂಪರ್ಕ ಪಡೆದ ನೀರಾವರಿ ಪಂಪ್‌ಗಳ ಸಕ್ರಮ.

930(1432) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಇಂದನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.